## ಸಮಾಜ ವಿಜ್ಞಾನ ರಾಜ್ಯಮಟ್ಟದ SSLC ಪರೀಕ್ಷೆಯ ಮಾದರಿ ಉತ್ತರಗಳು–2021–22

### ಸರ್ಕಾರಿ ಪ್ರೌಢಶಾಲೆ, ಚವಲಿಹಳ್ಳಿ ಗೊಲ್ಲರಹಟ್ಟಿ, ಚಿತ್ರದುರ್ಗ ತಾಲ್ಲೂಕು & ಜಿಲ್ಲೆ.

| ಕ್ರ.ಸಂ | ಮಾದರಿ ಉತ್ತರಗಳು | ಅಂಕಗಳು |
|---|---|---|
| I | | |
| 1 | B) ವಾಸ್ಕೋಡಿಗಾಮ | 1 |
| 2 | B) ಖಿಲಾಫತ್ | 1 |
| 3 | A) ಅಲಿಪ್ತ | 1 |
| 4 | C) ಗೃಹಿಣಿ | 1 |
| 5 | B) ಮೂಕನಾಯಕ | 1 |
| 6 | D) ತೆಲಂಗಾಣ | 1 |
| 7 | C) 73ನೇ ತಿದ್ದುಪಡಿ | 1 |
| 8 | B) ಚಾಲ್ತಿ ಖಾತೆ | 1 |
| II. | | |
| 9 | ವೆಲ್ಲೆಸ್ಲಿಯ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ಅವನು ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಮರಳಿದನು | 1 |
| 10 | ಡಾ.ಬಾಬು ರಾಜೇಂದ್ರ ಪ್ರಸಾದ್ | 1 |
| 11 | ಡಿಸೆಂಬರ್–10 | 1 |
| 12 | ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರದಿರುವ ಜನರಾಶಿಯೇ ಜನಮಂದೆ | 1 |
| 13 | ನೀಲಗಿರಿ ಬೆಟ್ಟಗಳಲ್ಲಿ | 1 |
| 14 | ಮ್ಯಾಂಗ್ರೋವ್ ಅರಣ್ಯಗಳು | 1 |
| 15 | ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸಿದ ಸರಕು–ಸೇವೆಗಳ ಒಟ್ಟು ಮೌಲ್ಯ | 1 |
| 16 | ಅಜೀಂ ಪ್ರೇಮ್‌ಜಿ | 1 |
| III. | | |
| 17 | ಬಕ್ಸರ್ ಕದನದ ಪರಿಣಾಮಗಳೇನು?<br>* ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕನ್ನು 2ನೇ ಆಲಂ ನೀಡಿದನು<br>* ಷಾ ಆಲಂ ವಾರ್ಷಿಕ 26 ಲಕ್ಷ ಪಡೆದು ಬಂಗಾಳದ ಮೇಲಿನ ಹಕ್ಕನ್ನು ಕಂಪನಿಗೆ ಬಿಟ್ಟುಕೊಟ್ಟನು. | 2 |

| | | |
|---|---|---|
| | * ಔದ್‌ನ ನವಾಬ ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷರೂಪಾಯಿ ಕೊಡಬೇಕಾಯಿತು<br>* ಮೀರ್ ಜಾಫರ್ ಮಗನಿಗೆ ವಿಶ್ರಾಂತಿ ವೇತನ ನೀಡಲಾಯಿತು | |
| **18** | **ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಯಾವುವು?**<br>* ಬ್ರಿಟಿಷ್ ಸೈನ್ಯದ ತುಕಡಿಯನ್ನು ತನ್ನಲ್ಲಿ ಇರಿಸಿಕೊಳ್ಳಬೇಕು<br>* ಅದರ ನಿರ್ವಹಣಾ ವೆಚ್ಚ ಭರಿಸಬೇಕು<br>* ರಾಜನ ಆಸ್ಥಾನದಲ್ಲಿ ರೆಸಿಡೆಂಟ್ ನೇಮಕ<br>* ಬ್ರಿಟಿಷರ ಅನುಮತಿ ಇಲ್ಲದೆ ಯಾವುದೇ ರಾಜ್ಯದೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳುವಂತಿಲ್ಲ. | **2** |
| **19** | **ಪಂಚಶೀಲ ತತ್ವಗಳು ಯಾವುವು?**<br>* ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ & ಸಾರ್ವಭೌಮತಗೆ ಗೌರವ<br>* ಪರಸ್ಪರ ಆಕ್ರಮಣ ಮಾಡದಿರುವುದು<br>* ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಇಲ್ಲ<br>* ಪರಸ್ಪರ ಸಹಕಾರ<br>* ಶಾಂತಿಯುತ ಸಹಬಾಳ್ವೆ<br>**ಅಥವಾ**<br>**ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ**<br>* ಸಂವಿಧಾನದಲ್ಲಿ ಮೂಲಭೂತ ಹಕ್ಕು ನೀಡಿಕೆ<br>* ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆ<br>* ಎಲ್ಲಾ ವಿಧದ ಶೋಷಣೆ & ದಬ್ಬಾಳಿಕೆಗೆ ವಿರೋಧ<br>* ಮಾನವ ಹಕ್ಕುಗಳ ರಾಷ್ಟ್ರೀಯ & ರಾಜ್ಯ ಆಯೋಗ ರಚನೆ | **2** |
| **20** | **ಅಸಂಘಟಿತ ವಲಯದ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳನ್ನು ಪಟ್ಟಿ ಮಾಡಿ.**<br>* ವಲಸೆ<br>* ಸಾಮಾಜಿಕ ಅಭದ್ರತೆ<br>* ಬಾಲ ಕಾರ್ಮಿಕತನ ಪೋಷಣೆ<br>* ದೈಹಿಕ & ಮಾನಸಿಕ ದೌರ್ಜನ್ಯ<br>* ಕಾನೂನಿಕ ಚೌಕಟ್ಟುಗಳಿಲ್ಲ.<br>* ಯಾವುದೇ ನಿಗದಿತ ನಿಯಮ,ಕಾಯ್ದೆಗಳಿರುವುದಿಲ್ಲ<br>**ಅಥವಾ**<br>**ಯಾವುದಾದರೂ ನಾಲ್ಕು ಪರಿಸರ ಚಳುವಳಿಗಳನ್ನು ಹೆಸರಿಸಿ?**<br>* ಚಿಪ್ಕೋ ಚಳುವಳಿ<br>* ಅಪ್ಪಿಕೋ ಚಳುವಳಿ<br>* ನರ್ಮದಾ ಬಚಾವೋ ಆಂದೋಲನ<br>* ಮೌನ ಕಣಿವೆ ಆಂದೋಲನ<br>* ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿ | **2** |
| **21** | **ಭಾರತದ ವಾಯುಗುಣದ ಪ್ರಮುಖ ಋತುಮಾನಗಳಾವುವು?**<br>* ಚಳಿಗಾಲ * ಬೇಸಿಗೆ ಕಾಲ<br>* ಮಳೆಗಾಲ<br>* ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ | **2** |

| | | |
|---|---|---|
| 22 | **ಮಣ್ಣಿನ ಸವೆತಕ್ಕೆ ಕಾರಣಗಳೇನು?**<br>* ಅರಣ್ಯನಾಶ * ಅತಿಯಾಗಿ ಮೇಯಿಸುವುದು<br>* ವರ್ಗಾವಣೆ ಬೇಸಾಯ ಪದ್ಧತಿ * ಅವೈಜ್ಞಾನಿಕ ಬೇಸಾಯ ಪದ್ಧತಿ<br>* ಇಟ್ಟಿಗೆ,ಹೆಂಚು ಮೊದಲಾದವುಗಳ ತಯಾರಿಕೆ | 2 |
| 23 | ವಸತಿ ಯೋಜನೆಗಳನ್ನು ತಿಳಿಸಿ.<br>* ಆಶ್ರಯ ಯೋಜನೆ<br>* ಪ್ರಧಾನ ಮಂತ್ರಿ ಆವಾಸ್ ಯೋಜನೆ<br>* ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ | 2 |
| 24 | **ಗ್ರಾಹಕ ರಕ್ಷಣಾ ಕಾಯ್ದೆಯ ಉದ್ದೇಶಗಳೇನು?**<br>* ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ<br>* ಅಪಾಯಕಾರಿ ವಸ್ತುಗಳ ತಯಾರಿಕೆ& ಮಾರಾಟವನ್ನು ತಪ್ಪಿಸುವುದು.<br>* ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.<br>* ಗುಣಮಟ್ಟ, ಅಳತೆ,ತೂಕ,ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು<br>* ಬಳಕೆದಾರರಿಗೆ ಸೂಕ್ತ ಪರಿಹಾರ ಕೊಡಿಸುವುದು<br>* ಗ್ರಾಹಕ ಶಿಕ್ಷಣ ನೀಡಿ ಜನರಲ್ಲಿ ಜಾಗೃತಿ ಮೂಡಿಸುವುದು | 2 |
| IV. | | |
| 25 | **ಭಾರತದಲ್ಲಿ ಬ್ರಿಟಿಷ್ ಇಂಗ್ಲೀಷ್ ಶಿಕ್ಷಣದ ಪರಿಣಾಮಗಳೇನು?**<br>* ವೈಜ್ಞಾನಿಕ ಆಲೋಚನೆ ಮತ್ತು ರಾಷ್ಟ್ರೀಯವಾದಿ ದೃಷ್ಟಿಕೋನ ಬೆಳವಣಿಗೆ<br>* ಸ್ಥಳೀಯ ಭಾಷೆ & ಸಾಹಿತ್ಯಕ್ಕೆ ಪ್ರೋತ್ಸಾಹ<br>* ವೃತ್ತ ಪತ್ರಿಕೆಗಳು ಹುಟ್ಟಿಕೊಂಡವು.<br>* ಸಾಮಾಜಿಕ & ಧಾರ್ಮಿಕ ಚಳುವಳಿಗೆ ನಾಂದಿ<br>* ಸ್ವಾತಂತ್ರ್ಯ ಚಳುವಳಿಗೆ ಪ್ರೋತ್ಸಾಹ<br>* ಸಾಂಸ್ಕೃತಿಕ ಪರಂಪರೆಯನ್ನು ಅರಿತುಕೊಳ್ಳಲು ಸಾಧ್ಯವಾಯಿತು | 3 |
| 26 | **ಆರ್ಯ ಸಮಾಜದ ಉದ್ದೇಶಗಳೇನು?**<br>* ಸ್ತ್ರೀ ಶೋಷಣೆ ವಿರೋಧ<br>* ಬಾಲ್ಯವಿವಾಹ * ಮೂರ್ತಿ ಪೂಜೆ ಖಂಡನೆ<br>* ಜಾತಿಪದ್ದತಿ ವಿರೋಧ * ಅರ್ಥಹೀನ ಆಚರಣೆಗಳ ಖಂಡನೆ<br>* ಸಮಾನತೆಗೆ ಆದ್ಯತೆ * ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ<br>**ಅಥವಾ**<br>**ಭಾರತವು ಸ್ವಾತಂತ್ರ್ಯ ಗಳಿಸಿದ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆಗಳಾವುವು?**<br>* ನಿರುದ್ಯೋಗ * ಭ್ರಷ್ಟಾಚಾರ * ತಾರತಮ್ಯ *ಪ್ರಾಂತೀಯ ಅಸಮಾನತೆ<br>* ಕೋಮುವಾದ * ಭಯೋತ್ಪಾದಕತೆ | 3 |
| 27 | **ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತಗೆ ಕಾರಣಗಳೇನು?**<br>* ಸೂಕ್ತ ಸೇನಾ ನಾಯಕತ್ವ ಮತ್ತು ಸಂಘಟನೆಯ ಕೊರತೆ.<br>* ಅನೇಕ ಕಡೆ ಲೂಟಿ, ದರೋಡೆ ಮಾಡಿ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡರು.<br>* ಸೂಕ್ತ ಮಾರ್ಗದರ್ಶನದ ಕೊರತೆ<br>* ದೇಶಿಯ ರಾಜರುಗಳು ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ.<br>* ಸಂಘಟನೆಯ ಕೊರತೆ<br>* ನಿರ್ದಿಷ್ಟ ಗುರಿ ಇರಲಿಲ್ಲ * ದಂಗೆ ಭಾರತದಾದ್ಯಂತ ವ್ಯಾಪಿಸಿರಲಿಲ್ಲ. | 3 |

| | | |
|---|---|---|
| **28** | **ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**<br>* ಕಾಶ್ಮೀರ ಸಮಸ್ಯೆಗೆ ಬೆಂಬಲ<br>* ಚೀನಾ ದಾಳಿ ಖಂಡನೆ<br>* 1971ರಲ್ಲಿ 20 ವರ್ಷಗಳ ಶಾಂತಿ ಒಪ್ಪಂದ<br>* ಬಿಲಾಯಿ, ಬೊಕಾರೋಗಳಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ನೆರವು<br>* ವ್ಯಾಪಾರ & ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ನೆರವು<br>* ಭದ್ರತಾ ಸಮಿತಿಯಲ್ಲಿನ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಪ್ರತಿಪಾದನೆ. | **3** |
| **29** | **ಭಾರತದಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಇರುವ ಕಾನೂನು ಕ್ರಮಗಳನ್ನು ಬರೆಯಿರಿ.**<br>* ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆಯನ್ನು ತೊಡೆದು ಹಾಕಿದೆ.<br>* 1955ರಲ್ಲಿ ಅಸ್ಪೃಶ್ಯತಾ ಅಪರಾಧ ಕಾಯ್ದೆ ಜಾರಿ<br>* 1976ರಲ್ಲಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿ<br>* ಸಾರ್ವತ್ರಿಕ ಮತದಾನದ ಹಕ್ಕು<br>* ಸಮಾನತೆಯ ಹಕ್ಕನ್ನು ನೀಡಲಾಗಿದೆ.<br>* ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ & ಉದ್ಯೋಗದಲ್ಲಿ ಮೀಸಲಾತಿ<br>* ವಿಶೇಷ ಜವಾಬ್ದಾರಿಯನ್ನು ರಾಜ್ಯಗಳಿಗೆ ವಹಿಸಲಾಗಿದೆ. | **3** |
| **30** | **ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳು ಯಾವುವು?**<br>* ಕಚ್ಚಾ ವಸ್ತುಗಳ ಸರಬರಾಜು<br>* ಶಕ್ತಿ ಸಂಪನ್ಮೂಲಗಳ ಪೂರೈಕೆ<br>* ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ<br>* ಮಾರುಕಟ್ಟೆ ಸೌಲಭ್ಯ<br>* ಬಂಡವಾಳ<br>* ಕಾರ್ಮಿಕರು ಮತ್ತು ನೀರು ದೊರೆಯುವಿಕೆ<br>* ಸೂಕ್ತ ವಾಯುಗುಣ<br>* ಸರ್ಕಾರದ ನೀತಿ ನಿಯಮಗಳು.<br>**ಅಥವಾ**<br>ಆವರ್ತ ಮಾರುತಗಳ ಪರಿಣಾಮಗಳನ್ನು ಪಟ್ಟಿ ಮಾಡಿ.<br>* ಜೀವ ಹಾನಿ<br>* ಆಸ್ತಿ ನಾಶ<br>* ಕಟ್ಟಡಗಳಿಗೆ ಧಕ್ಕೆ<br>* ಸಾರಿಗೆ ಮತ್ತು ಸಂಪರ್ಕಅಸ್ತವ್ಯಸ್ತ<br>* ವಿದ್ಯುತ್ ಸರಬರಾಜಿಗೆ ಅಡಚಣೆ ಉಂಟಾಗುತ್ತದೆ.<br>* ಬೆಳೆ ನಾಶ<br>* ಮಣ್ಣಿನ ಸವೆತ<br>* ಸ್ವಾಭಾವಿಕ ಸಸ್ಯವರ್ಗ ಪ್ರಾಣಿ ಸಂಕುಲಗಳಿಗೆ ಹಾನಿ<br>* ಮೂಲ ಸೌಲಭ್ಯಗಳ ವ್ಯತ್ಯಯ | **3** |
| **31** | ಸಾರಿಗೆಯ ಪ್ರಾಮುಖ್ಯತೆಯೇನು? ವಿವರಿಸಿ.<br>* ಕೃಷಿಯ ಅಭಿವೃದ್ಧಿಗೆ ನೆರವಾಗುತ್ತದೆ<br>* ಕೈಗಾರಿಕಾ ಪ್ರಗತಿಗೆ ಉತ್ತೇಜನ ಸಿಗುತ್ತದೆ<br>* ದೇಶೀಯ & ವೀದೇಶಿ ವ್ಯಾಪಾರದ ವೃದ್ಧಿ | **3** |

| | | |
|---|---|---|
| | * ಉದ್ಯೋಗ ಸೃಷ್ಟಿ<br>* ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ<br>* ರಕ್ಷಣಾ ಪಡೆಗೆ ನೆರವಾಗುತ್ತದೆ. | |
| **32** | **ಭಾರತದಲ್ಲಿ ಅಳವಡಿಸಿಕೊಂಡಿರುವ ಪಂಚಾಯತ್‌ರಾಜ್ ವ್ಯವಸ್ಥೆಯ ಲಕ್ಷಣಗಳನ್ನು ವಿವರಿಸಿ.**<br>* ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿಗಳ ಮೂರು ಹಂತದ ಪಂಚಾಯಿತಿ ವ್ಯವಸ್ಥೆ<br>* ಗ್ರಾಮ ಸಭೆಯು ಅದರ ತಳಹದಿಯಾಗಿದೆ.<br>* ನೇರ ಹಾಗೂ ನಿಯಮಿತ ಚುನಾವಣೆಗಳು<br>* ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಾತಿ ನೀಡಿಕೆ.<br>* ಹಣಕಾಸು, ಆಡಳಿತಾತ್ಮಕ, ಮುಂಗಡ ಪತ್ರ ಮಂಡಿಸುವ ಜವಬ್ದಾರಿ<br>* ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ.<br>* ಪಂಚಾಯತಿಯನ್ನು ವಿಸರ್ಜಿಸುವಾಗ ಅನುಸರಿಸಬೇಕಾದ ಕಟ್ಟುನಿಟ್ಟಿನ ಕ್ರಮಗಳು.<br>* ವಿಸರ್ಜನೆಗೊಂಡ ಆರು ತಿಂಗಳುಗಳ ಒಳಗೇ ಕಡ್ಡಾಯ ಚುನಾವಣೆ ನಡೆಸುವುದು. | 3 |
| **33** | **ಬ್ಯಾಂಕಿನ ಕಾರ್ಯಗಳೇನು?**<br>* ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು.<br>* ಸಾಲಗಳನ್ನು ಕೊಡುವುದು.<br>* ಸಾಲಪತ್ರಗಳನ್ನು &ಜವಾಬ್ದಾರಿ ಪತ್ರಗಳನ್ನು ಕೊಡುವುದು.<br>* ಭದ್ರತಾ ಕಪಾಟುಗಳನ್ನು ಬಾಡಿಗೆಗೆಕೊಡುವುದು.<br>* ಹಣದ ಭದ್ರತೆ ಕಾಪಾಡುತ್ತದೆ.<br>* ಹಣದ ವರ್ಗಾವಣೆ.<br>* ಹುಂಡಿಗಳನ್ನು ಸೋಡಿ ಮಾಡುವುದು<br>**ಅಥವಾ**<br>**ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವೇನು?**<br>* ಬಂಡವಾಳ ನಿರ್ಮಾಣ<br>* ಅಧಿಕ ಪ್ರಮಾಣದ ಉದ್ಯೋಗಾವಕಾಶ<br>* ಜಿಡಿಪಿ & ತಲಾದಾಯದ ಹೆಚ್ಚಳ<br>* ಪ್ರಾಂತೀಯ ತಾರತಮ್ಯ ನಿವಾರಣೆ<br>* ರಫ್ತು ವ್ಯಾಪಾರ ಹೆಚ್ಚಳ<br>* ಮಾರುಕಟ್ಟೆ ಅಭಿವೃದ್ಧಿ<br>* ಜೀವನಮಟ್ಟ ಸುಧಾರಣೆ<br>* ಆದಾಯ & ಸಂಪತ್ತಿನ ವಿಕೇಂದ್ರೀಕರಣ | 3 |
| **V** | | |
| **34** | **ದೊಂಡಿಯಾ ವಾಘ್ ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು?**<br>* ದೊಂಡಿಯಾ ವಾಘ್ ಸೈನ್ಯವನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಟಕ್ಕಿಳಿದನು.<br>* ಶಿವಮೊಗ್ಗ & ಬಿದನೂರು ಕೋಟೆ ವಶಪಡಿಸಿಕೊಂಡನು<br>* ಬ್ರಿಟಿಷರು ವಾಘ್‌ನ ಬಂಡಾಯವನ್ನು ಹತ್ತಿಕ್ಕಲು ಪ್ರಯತ್ನಸಿದರು.<br>* ದೊಂಡಿಯಾ ತನ್ನ ನೆಲೆ ಕಳೆದುಕೊಂಡನು.<br>* ಬ್ರಿಟಿಷರ ಸೈನ್ಯಕ್ಕೆ ಧೃತಿಗೆಡದೆ ದೊಂಡಿಯಾ ತನ್ನ ಹೋರಾಟ ಮುಂದುವರಿಸಿದನು. | 4 |

| | | |
|---|---|---|
| | * ದೊಂಡಿಯಾನ್ನು ಕೊನೆಗಾಣಿಸಲು ಬ್ರಿಟಿಷರು ದೇಶಿಯ ಸಂಸ್ಥಾನಗಳ ಸಹಾಯ ಕೋರಿದರು.<br>* ಬ್ರಿಟಿಷರು ಕೋನ್‌ಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು<br>**ಅಥವಾ**<br>**ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ.**<br>* ಬಿಪಿನ್ ಚಂದ್ರಪಾಲ್, ಲಾಲ ಲಜಪತ್ ರಾಯ್ & ಬಾಲಗಂಗಾಧರ್ ತಿಲಕ್ ಪ್ರಮುಖ ನಾಯಕರು.<br>* ಬಂಗಾಳ ವಿಭಜನೆ ವಿರೋಧ<br>* ಸ್ವದೇಶೀ ಚಳುವಳಿಯನ್ನು ಆರಂಭಿಸಿದರು<br>* ತಿಲಕರು ' ಸ್ವರಾಜ್ಯ ನನ್ನಜನ್ಮ ಸಿದ್ದ ಹಕ್ಕು ಅದನ್ನು ಪಡೆಯುತ್ತೇನೆ' ಎಂದರು.<br>* ಗಣೇಶ ಮತ್ತು ಶಿವಾಜಿ ಉತ್ಸವ ಆರಂಭ<br>* ಕೇಸರಿ ಮತ್ತು ಮರಾಠ ಪತ್ರಿಕೆಗಳ ಪ್ರಾರಂಭ<br>* ಸಾಮಾನ್ಯ ಜನರನ್ನು ಹೋರಾಟಕ್ಕೆ ಪ್ರೇರೇಪಿಸಿದರು<br>* ಮಂದಗಾಮಿಗಳ ಮೃದು ಧೋರಣೆಯನ್ನು ಟೀಕಿಸಿದರು.<br>* ಪತ್ರಿಕೆಗಳ ಮೂಲಕ ರಾಷ್ಟ್ರೀಯ ಹೋರಾಟಕ್ಕೆ ಪ್ರೇರಣೆ | |
| **35** | **ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರ ಪಾತ್ರವೇನು?**<br>* ಉನ್ನತ ಹುದ್ದೆ ತ್ಯಜಿಸಿ ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸಿದರು<br>* ಗೃಹ ಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು<br>* 'ಫಾರ್ವರ್ಡ್ ಬ್ಲಾಕ್' ಪಕ್ಷ ಕಟ್ಟಿದರು<br>* ವಿದೇಶದಲ್ಲಿರುವ ಭಾರತೀಯರ ಸಹಕಾರ<br>* ಹಿಟ್ಲರ್ & ಮುಸುಲೋನಿಯ ಸಹಾಯ<br>* ಅಜಾದ್ ಹಿಂದ್ ರೇಡಿಯೋದಲ್ಲಿ ಭಾಷಣ<br>* ಜಪಾನ್ ಸಹಾಯದಿಂದ ಐ.ಎನ್.ಎ ಸೈನ್ಯ ಸಂಘಟಿಸಿದರು<br>* 'ದೆಹಲಿ ಚಲೋ'ಗೆ ಕರೆ ನೀಡಿದರು<br>* ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡುತ್ತೇನೆ ಎಂದರು<br>* ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮರಣ | **4** |
| **36** | **ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು?**<br>* ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆ ಸ್ಥಾಪನೆ<br>* ಮಹಿಳಾ ಶಿಕ್ಷಣಕ್ಕೆ ಒತ್ತು<br>* ಬಾಲ್ಯ ವಿವಾಹ ನಿಷೇಧ ಕಾಯಿದೆ ಜಾರಿ<br>* ಸ್ತೀ ಶಕ್ತಿ ಕಾರ್ಯಕ್ರಮ<br>* ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ<br>* ರಾಜಕೀಯದಲ್ಲಿ ಮೀಸಲಾತಿ<br>* ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ<br>* ಮಹಿಳಾ ಆಯೋಗ ರಚನೆ<br>* ಸ್ತ್ರೀಶಕ್ತಿ ಸಂಘಗಳ ರಚನೆ. | **4** |
| **37** | **ಭಾರತದಲ್ಲಿ ಅನುಸರಿಸುವ ಕೃಷಿಯ ವಿಧಗಳನ್ನು ಪಟ್ಟಿ ಮಾಡಿ.**<br>* ಜೀವನಾಧಾರಿತ ಬೇಸಾಯ<br>* ಸಾಂದ್ರ ಬೇಸಾಯ | **4** |

| | | |
|---|---|---|
| | * ವಾಣಿಜ್ಯ ಬೇಸಾಯ<br>* ಮಿಶ್ರ ಬೇಸಾಯ<br>* ನೆಡುತೋಪು ಬೇಸಾಯ<br>* ಒಣ ಬೇಸಾಯ<br>* ಆರ್ದ್ರ ಬೇಸಾಯ<br>* ನೀರಾವರಿಬೇಸಾಯ | |
| **VI** | | |
| **38** |  | **1+4=5** |